SC. No.43-2018
ಪಿಡಬ್ಲ್ಯೂ-5
ದಿಃ 07-01-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.
**ಮುಂದುವರೆದ ಮುಖ್ಯವಿಚಾರಣೆಃ - ಮಾನ್ಯ ಸರ್ಕಾರಿ ಅಭಿಯೋಜಕರಿಂದ**

ಸಾಕ್ಷಿಗೆ ಈಗ ಮು.ಮಾ.109 ನ್ನು ತೋರಿಸಲಾಗಿದ್ದು, ಸಾಕ್ಷಿಯು ಅದನ್ನು ನೋಡಿ ಅದು ಮೃತಳ ಕುತ್ತಿಗೆಗೆ ಇದ್ದ ಬಟ್ಟೆಯೆಂದು ಗುರುತಿಸಿರುತ್ತಾರೆ. ಅದೇ ರೀತಿ ಸಾಕ್ಷಿಗೆ ಮು.ಮಾ.1 ಮೋಟಾರ್ ಸೈಕಲ್ ಇರುವ ಒಂದು ಪೋಟೋವನ್ನು ತೋರಿಸಲಾಗಿದ್ದು, ಸಾಕ್ಷಿಯು ಸದರಿ ಪೋಟೋದಲ್ಲಿ ಮೋಟಾರ್ ಸೈಕಲ್ ಅನ್ನು ನೋಡಿ ಗುರುತಿಸಿದ್ದು, ಸದರಿ ಪೋಟೋವನ್ನು ನಿ.ಪಿ.31 ಎಂದು ಗುರುತಿಸಲಾಯಿತು. ಅಲ್ಲದೇ ಸಾಕ್ಷಿಗೆ ಕಡತದಲ್ಲಿ ಇರುವ 13 ಪೋಟೋಗಳನ್ನು ತೋರಿಸಲಾಗಿದ್ದು, ಸಾಕ್ಷಿಯು ಅವುಗಳನ್ನು ನೋಡಿ ಸದರಿ ವಸ್ತುಗಳನ್ನು ಮೃತಳಿಗೆ ನೀಡಿದ ವಸ್ತುಗಳು ಎಂದು ಗುರುತಿಸಿರುತ್ತಾರೆ. ಸದರಿ ಪೋಟೋಗಳನ್ನು ಕ್ರಮವಾಗಿ ನಿ.ಪಿ.32 ರಿಂದ 44 ಎಂದು ಗುರುತಿಸಲಾಯಿತು.

ಅಲ್ಲದೇ ಸಾಕ್ಷಿಗೆ ಮು.ಮಾ.63, 64, 65, 66, 67, 72, 73, 75, 77, 78, 82, 84, 89, 90, 91, 92, 96, 98, 99, 102, 103, 104 ನ್ನು ತೋರಿಸಲಾಗಿದ್ದು, ಸಾಕ್ಷಿಯು ಅವುಗಳನ್ನು ನೋಡಿ ಅವುಗಳನ್ನು ಮದುವೆ ಸಮಯದಲ್ಲಿ ಹಾಕಿಕೊಟ್ಟಿರುವ ವಸ್ತುಗಳು ಎಂದು ನುಡಿದಿರುತ್ತಾರೆ. ಮೃತ ಕುಸುಮ ಈಕೆಯು ತನ್ನ ಗಂಡನ ಮನೆಯಲ್ಲಿ ಮದುವೆಯಾದ ಒಂದರಿಂದ ಎರಡು ವರ್ಷದ ಒಳಗಡೆ ತೀರಿಕೊಂಡಿರುತ್ತಾಳೆ.

**ಪಾಟೀಸವಾಲುಃ ಆರೋಪಿತರ ಪರ ವಕೀಲರಿಂದ.**

ನಾನು ಮೆಕ್ಕೆಜೋಳದ ವ್ಯಾಪಾರವನ್ನು ಕಳೆದ 25 ರಿಂದ 30 ವರ್ಷಗಳಿಂದ ಮಾಡಿಕೊಂಡು ಬರುತ್ತಿದ್ದೇನೆ. ನನಗೆ ಸದರಿ ವ್ಯಾಪಾರ ಮಾಡಲು ಯಾವುದೇ ಲೈಸನ್ಸ್ ಇರುವುದಿಲ್ಲ ಎಂದರೆ ಸಾಕ್ಷಿಯು ಮೊದಲು ನನಗೆ ಲೈಸನ್ಸ್ ಇದ್ದು, ಈಗ ಸುಮಾರು 10 ವರ್ಷಗಳ ಹಿಂದೆ ಸದರಿ ಲೈಸನ್ಸ್ ನಾನು ಕ್ಲೋಸ್ ಮಾಡಿಕೊಂಡಿರುತ್ತೇನೆ. ಸದರಿ ಮೆಕ್ಕೆಜೋಳಗಳನ್ನು ನಾನು ರೈತರು ಬೆಳೆಸುತ್ತಿದ್ದ ಹೊಲಗಳಿಗೆ ಹೋಗಿ ಖರೀದಿ ಮಾಡುತ್ತಿದ್ದೆ ಎಂದರೆ ಸರಿ. ನಾನು ಆ ರೀತಿಯಾಗಿ ಮೆಕ್ಕೆಜೋಳ ವ್ಯಾಪಾರ ಮಾಡುವಾಗ ತೂಕದಲ್ಲಿ ವ್ಯತ್ಯಾಸ ಮಾಡಿ ಹೆಚ್ಚಿನ ಮೆಕ್ಕೆಜೋಳವನ್ನು ಖರೀದಿಸಿದ ಕುರಿತು ಹುಲಿಕಟ್ಟೆ ಮತ್ತು ಆಸಗೋಡು ಗ್ರಾಮದ ರೈತರು ಹಾಗೂ ಮುಖಂಡರು ಸೇರಿಕೊಂಡು ನಾನು ಮಾಡಿದ ಮೋಸ ಸಾಬೀತು ಆದ ಕಾರಣ ನನ್ನಿಂದ ದಂಡವನ್ನು ದೇವಸ್ಥಾನದಲ್ಲಿ ಕಟ್ಟಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಅಲ್ಲದೇ ಕಳೆದ ಐದು ಆರು ವರ್ಷಗಳ ಹಿಂದೆ ಹುಲಿಕಟ್ಟೆ ಗ್ರಾಮದ ನೇತ್ರಮ್ಮ ಗಂಡ ಸಿದ್ದಬಸಪ್ಪ ಎನ್ನುವವರ ಮೆಕ್ಕೆಜೋಳವನ್ನು ನಿಟ್ಟು ಹಾಕುವಾಗ ಚೀಲಗಳನ್ನು ಕಡಿಮೆ ಸಂಖ್ಯೆಯಲ್ಲಿ ಎಣಿಸಿದ ಕುರಿತಾಗಿ ನನ್ನಿಂದ ರೂ.20,000-00 ವನ್ನು ಊರ ಮುಖಂಡರು ದೇವಸ್ಥಾನದಲ್ಲಿ ದಂಡವಾಗಿ ಕಟ್ಟಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ.

2010 ರಲ್ಲಿ ಎಪಿಎಂಸಿಯಲ್ಲಿ ನಾನು ಮೆಕ್ಕೆಜೋಳವನ್ನು ಸಬ್ಸಿಡಿ ರೂಪದಲ್ಲಿ ಖರೀದಿಸುವಾಗ ಸದರಿ ಎಪಿಎಂಸಿಯ ಮ್ಯಾನೇಜರ್ ಹಾಗೂ ಸಿಬ್ಬಂದಿಗಳ ಜೊತೆ ಸೇರಿಕೊಂಡು ಎರಡು ಎರಡು ಬಾರಿ ತೂಕ ಮಾಡಿದ ಕುರಿತಾಗಿ ನನ್ನ ಹಾಗೂ ಸದರಿ ಮ್ಯಾನೇಜರ್ ವಿರುದ್ಧ ಪ್ರಕರಣ ದಾಖಲಾಗಿ ಅದರಲ್ಲಿ ಸದರಿ ಮ್ಯಾನೇಜರ್ ಗೆ

ನ್ಯಾಯಾಲಯದಲ್ಲಿ ಜಾಮೀನು ಸಿಗದೇ ಆತ ಜೈಲಿನಲ್ಲಿ ಇದ್ದ ಎಂದರೆ ಸಾಕ್ಷಿಯು ಮ್ಯಾನೇಜರ್ ಜೈಲಿನಲ್ಲಿ ಇದ್ದಿರಬಹುದು, ನನ್ನ ವಿರುದ್ಧ ಯಾವುದೇ ಪ್ರಕರಣ ದಾಖಲಾಗಿಲ್ಲ ಎಂದು ನುಡಿದಿರುತ್ತಾರೆ. ಸದರಿ ಪ್ರಕರಣದಲ್ಲಿ ನನ್ನ ಹೆಂಡತಿಯ ತಮ್ಮ ರೇವಣಸಿದ್ದಪ್ಪನ ಮೇಲೆಯೂ ಕೂಡ ಪ್ರಕರಣ ದಾಖಲಾಗಿತ್ತು ಎಂದರೆ ಸರಿಯಲ್ಲ. ಸದರಿ ರೇವಣಸಿದ್ದಪ್ಪ ಈ ಪ್ರಕರಣದಲ್ಲಿ ಸಾಕ್ಷಿ-27 ಆಗಿರುತ್ತಾರೆ ಎಂದರೆ ಸರಿ. ಸದರಿ ಎಪಿಎಂಸಿ ಮ್ಯಾನೇಜರ್ ಅವರ ಹೆಸರು ರಂಗಸ್ವಾಮಿಯಾಗಿದ್ದು, ಆತ ನಮ್ಮ ಜೊತೆ ಸೇರಿಕೊಂಡು ಅಪರ ತಪರ ಮಾಡಿದ ಕಾರಣ ಆತನನ್ನು ಸೇವೆಯಿಂದ ವಜಾ ಮಾಡಲಾಗಿದೆ ಎಂದರೆ ನನಗೆ ತಿಳಿದಿರುವುದಿಲ್ಲ.

ಕುಸುಮಾಳ ಮದುವೆಯು ಒಂದನೇ ಆರೋಪಿಯ ಜೊತೆ ಆಗುವ ಪೂರ್ವದಲ್ಲಿ ಆಕೆಯ ಮದುವೆಯ ನಿಶ್ಚಿತಾರ್ಥ ಕಮ್ಮತಿಹಳ್ಳಿಯ ಸಿದ್ದಪ್ಪ ಮಾಸ್ತರ್ ಅವರ ಮಗನ ಜೊತೆ ಆಗಿತ್ತು ಎಂದರೆ ಸರಿ. ಸದರಿಯವರು ಕೇಳಿದ ವರದಕ್ಷಿಣೆ ನೀಡಲು ಶಕ್ಯತೆ ಇಲ್ಲದೇ ಇರುವ ಕಾರಣ ಸದರಿ ಮದುವೆ ಮುರಿದುಹೋಗಿರುತ್ತದೆ ಎಂದರೆ ಸಾಕ್ಷಿಯು ಆ ಕಾರಣದಿಂದ ಮದುವೆ ಮುರಿದು ಹೋಗಿಲ್ಲ, ಸದರಿ ಹುಡುಗನಿಗೆ ಆರೋಗ್ಯ ಸರಿ ಇಲ್ಲದೇ ಇರುವ ಕಾರಣ ಮದುವೆ ಮುರಿದು ಹೋಗಿರುತ್ತದೆ ಎಂದು ನುಡಿದಿರುತ್ತಾರೆ. ಮೃತ ಕುಸುಮ ಚಿಕ್ಕ ವಯಸ್ಸಿನಲ್ಲಿ ಇದ್ದಾಗ ನನ್ನ ಮನೆಯಲ್ಲಿಯೇ ಬೆಳೆದಿದ್ದು, ಆಕೆಗೆ ನಾನೇ ಶಾಲೆ ಓದಿಸಿರುತ್ತೇನೆ ಎಂದರೆ ಸರಿ. ನನ್ನ ಮೊದಲನೇ ಹೆಂಡತಿಯ ಬಳಿ ಸದರಿ ಕುಸುಮಾಳನ್ನು ಬಿಟ್ಟಿದ್ದೆ ಎಂದರೆ ಸರಿ. ನಾನು ಆ ಸಮಯದಲ್ಲಿ ಎರಡನೇ ಹೆಂಡತಿಯ ಜೊತೆ ಪ್ರತ್ಯೇಕ ಇದ್ದೆ ಎಂದರೆ ಸಾಕ್ಷಿಯು ನಾನು ಎರಡು ಕಡೆ ಹೋಗಿ ಬಂದು ಮಾಡುತ್ತಿದ್ದೆ ಎಂದು ನುಡಿದಿರುತ್ತಾರೆ. ಆಕೆ ನನ್ನ ಮೊದಲನೇ ಹೆಂಡತಿಯ ಜೊತೆ ಇದ್ದ ಕಾರಣ ಕುಸುಮಾಳಿಗೆ ಆಕೆಯ ತಂದೆ ತಾಯಿಯ ಜೊತೆ ಒಳ್ಳೆಯ ಬಾಂಧವ್ಯ ಇರಲಿಲ್ಲ ಎಂದರೆ ಸರಿಯಲ್ಲ. ಆಕೆ ನನ್ನ ಮೊದಲನೇ ಹೆಂಡತಿಯ ಜೊತೆ ಇದ್ದ ಕಾರಣ ಕುಸುಮಾಳಿಗೂ ಹಾಗೂ ಫ್ರಾ.ಸಾ.3 ರವರ ನಡುವೆ ಒಳ್ಳೆಯ ಬಾಂಧವ್ಯ ಇರಲಿಲ್ಲ ಎಂದರೆ ಸರಿಯಲ್ಲ.

ನಾನು ಮತ್ತು 2 ನೇ ಆರೋಪಿ ಸಹಪಾಠಿಗಳು ಎಂದರೆ ಸಾಕ್ಷಿಯು ಕೇವಲ ಒಂದು ವರ್ಷ ಮಾತ್ರ ಜೊತೆಗೆ ಓದಿದ್ದೆವು ಎಂದು ನುಡಿದಿರುತ್ತಾರೆ. ನಾನು ಮತ್ತು 2 ನೇ ಆರೋಪಿ ಎಲೆಬೇತೂರು ಗ್ರಾಮದ ಖಾಸಗಿ ಶಾಲೆಯಲ್ಲಿ ಎಸ್ ಎಸ್ ಎಲ್ ಸಿ ವ್ಯಾಸಂಗವನ್ನು ಮಾತ್ರ ಜೊತೆ ಓದಿರುತ್ತೇವೆ. ಕುಸುಮಾಳ ನಿಶ್ಚಿತಾರ್ಥ ಆದ ಬಳಿಕ ಸದರಿ ನಿಶ್ಚಿತಾರ್ಥ ಮುರಿದು ಹೋದ ನಂತರ ನನಗೆ ಎರಡನೇ ಆರೋಪಿತನು ಸ್ನೇಹಿತನಾದ ಕಾರಣ ಆತನ ಮಗ ಒಂದನೇ ಆರೋಪಿಗೆ ಕುಸುಮಾಳನ್ನು ಮದುವೆ ಮಾಡಿಸುವ ಕುರಿತು ನಾನೇ ಎರಡನೇ ಆರೋಪಿಯ ಬಳಿ ಪ್ರಸ್ತಾಪ ತೆಗೆದುಕೊಂಡು ಹೋಗಿದ್ದೆ ಎಂದರೆ ಸರಿಯಲ್ಲ. ಕುಸುಮಾಳ ನಿಶ್ಚಿತಾರ್ಥವು ಸದರಿ ಸಿದ್ದಪ್ಪ ಮಾಸ್ತರ್ ಎಂಬುವವನ ಜೊತೆ ಆದ ಬಳಿಕ ಅವರ ಮದುವೆಯ ಕುರಿತು ಕಲ್ಯಾಣ ಮಂಟಪವನ್ನು ಕೂಡ ನಾವು ಬುಕಿಂಗ್ ಮಾಡಿದ್ದೆವು ಎಂದರೆ ಸರಿಯಲ್ಲ.

ಮೃತ ಕುಸುಮಾಳ ಮದುವೆಯು ಒಂದನೇ ಆರೋಪಿಯ ಜೊತೆ ಆಗುವ ದಿನದಂದೇ ಫ್ರಾ.ಸಾ.3 ರವರ ಮದುವೆಯನ್ನು ಕೂಡ ಅದೇ ದಿನ ಮಾಡುವ ಕುರಿತು ಮಾತನಾಡಿದ್ದೆವು ಎಂದರೆ ಸರಿ. ಸದರಿ ಎರಡು ಮದುವೆಯು ದಾವಣಗೆರೆಯ ಅಕ್ಕಮಹಾದೇವಿ ರಸ್ತೆಯಲ್ಲಿ ಇರುವ ಮೋತಿ ಚನ್ನಬಸಮ್ಮ ಕಲ್ಯಾಣ ಮಂಟಪದಲ್ಲಿ ಆಗಿರುತ್ತದೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಅದು ಹೊಸ ಕಲ್ಯಾಣ ಮಂಟಪ ಎಂದು ನುಡಿದಿರುತ್ತಾರೆ.

ಪ್ರಾ.ಸಾ.3 ರವರು ಚಿಕ್ಕನಾಗತಿಹಳ್ಳಿಯ ಹನುಮನಹಳ್ಳಿ ಸಿದ್ದಪ್ಪ ಎನ್ನುವವರ ಮಗಳನ್ನು ಮದುವೆಯಾಗಿರುತ್ತಾನೆ ಎಂದರೆ ಸರಿ. ಸದರಿ ಎರಡು ಮದುವೆಯು ಒಂದೇ ದಿನ ಒಂದೇ ಕಲ್ಯಾಣ ಮಂಟಪದಲ್ಲಿ ಆದ ಕಾರಣ ಪ್ರಾ.ಸಾ.3 ರವರ ಬೀಗರು ಸದರಿ ಮದುವೆಯ ಅರ್ಧ ಖರ್ಚನ್ನು ಭರಿಸಿದ್ದರು ಎಂದರೆ ಸರಿಯಲ್ಲ.

ನಾವು ವೀರಶೈವ ಸಾದು ಸಧರ್ಮ ಸಮಾಜಕ್ಕೆ ಸೇರಿದವರು ಎಂದರೆ ಸರಿ. ನಮ್ಮ ಸಮಾಜದಲ್ಲಿ ವರನಿಗೆ ವರೋಪಚಾರವಾಗಿ ಬಂಗಾರದ ಉಂಗುರ ಅಥವಾ ಕೊರಳು ಚೈನು ಅಥವಾ ಕೈ ಚೈನು ಕೊಡುವ ಸಂಪ್ರದಾಯ ಇದೆ ಎಂದರೆ ಸಾಕ್ಷಿಯು ಸರಿ ಎಂದು ನುಡಿದು ನಂತರ ಕೇವಲ ಬಂಗಾರದ ಉಂಗುರ ಮಾತ್ರ ನೀಡುವ ಸಂಪ್ರದಾಯ ಇದೆ ಎಂದು ನುಡಿದಿರುತ್ತಾರೆ. ಅಲ್ಲದೇ ಮುಂದುವರೆದು ಸದರಿ ಬಂಗಾರದ ವಸ್ತುಗಳನ್ನು ಎಲ್ಲರ ಬಳಿ ನೀಡುವ ಶಕ್ತತೆ ಇರುವುದಿಲ್ಲ, ಶಕ್ತತೆ ಇದ್ದವರು ಮಾತ್ರ ನೀಡುತ್ತಾರೆ ಎಂದು ನುಡಿದಿರುತ್ತಾರೆ. ಸಾಕ್ಷಿಗೆ ಈಗ ಕಡತದಲ್ಲಿ ಇರುವ ನಿ.ಪಿ.30(ಎ) ಪೋಟೋವನ್ನು ತೋರಿಸಿ ಅದರಲ್ಲಿ ಒಂದನೇ ಆರೋಪಿಗೆ ಕೈಚೈನನ್ನು ಉಡುಗೊರೆಯಾಗಿ ನನ್ನ ಮಗ ಮಲ್ಲಿಕಾರ್ಜುನ ನೀಡುತ್ತಿರುವುದು ಕಂಡುಬರುತ್ತದೆ ಎಂದರೆ ಸರಿ. ನನ್ನ ಮಗ ಮಲ್ಲಿಕಾರ್ಜುನ ಹಾಗೂ ಬಾಪೂಜಿ ಆಸ್ಪತ್ರೆಯಲ್ಲಿ ಇರುವ ಡಾ.ಸಂತೋಷ್ ಚಾ.ಸಾ.32 ಎನ್ನುವವರು ಒಬ್ಬರಿಗೊಬ್ಬರು ಸ್ನೇಹಿತರು ಎಂದರೆ ನನಗೆ ಗೊತ್ತಾಗುವುದಿಲ್ಲ. ನನ್ನ ಮಗ ಮಲ್ಲಿಕಾರ್ಜುನ ನೇತ್ರ ತಜ್ಞ ಎಂದರೆ ಸರಿ.

ನನ್ನ ಮಗಳು ಸುನೀತಾ ಬಾಪೂಜಿ ಆಸ್ಪತ್ರೆಯಲ್ಲಿ ಮುಖ್ಯ ನರ್ಸ್ ಆಗಿ ಕೆಲಸ ಮಾಡುತ್ತಿದ್ದಾಳೆ ಎಂದರೆ ಸರಿ. ಆಕೆಯು ಬಾಪೂಜಿ ಆಸ್ಪತ್ರೆಯ ಎಲ್ಲಾ ಆಗು ಹೋಗುಗಳನ್ನು ನೋಡಿಕೊಳ್ಳುತ್ತಾಳೆ ಎಂದರೆ ನನಗೆ ಗೊತ್ತಿರುವುದಿಲ್ಲ. ಆಕೆ ಆಸ್ಪತ್ರೆಯ ಎಲ್ಲಾ ವೈದ್ಯಾಧಿಕಾರಿಗಳ ಜೊತೆ ಆತ್ಮೀಯದಿಂದ ಇದ್ದಾಳೆ ಎಂದರೆ ನನಗೆ ಗೊತ್ತಿರುವುದಿಲ್ಲ. ನಾನು, ನನ್ನ ಮಗ ಮಲ್ಲಿಕಾರ್ಜುನ ಸೇರಿಕೊಂಡು ಬಾಪೂಜಿ ಆಸ್ಪತ್ರೆಯ ಚಾ.ಸಾ.32 ಸಂತೋಷ್ ರವರೊಂದಿಗೆ ಸಮಾಲೋಚಿಸಿ ಪ್ರಭಾವ ಬೀರಿ ಸರ್ಕಾರಿ ಆಸ್ಪತ್ರೆಯಲ್ಲಿ ಇದ್ದ ಮೃತ ಕುಸುಮಾಳ ಶವವನ್ನು ಬಾಪೂಜಿ ಆಸ್ಪತ್ರೆಗೆ ಸ್ಥಳಾಂತರ ಮಾಡಿಸಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ನಾವು ಸರ್ಕಾರಿ ಆಸ್ಪತ್ರೆಗೆ ಹೋದಾಗ ಅಲ್ಲಿ ವೈದ್ಯರು ಇರಲಿಲ್ಲ ಎಂದು ನುಡಿದಿರುತ್ತಾರೆ. ಸ್ಥಳದಿಂದ ಮೃತಳ ಶವವನ್ನು ಸರ್ಕಾರಿ ಆಸ್ಪತ್ರೆಗೆ ಪೋಲೀಸರು ತೆಗೆದುಕೊಂಡು ಬಂದಿರುತ್ತಾರೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಆಗ ನಾವು ಕೂಡ ಜೊತೆಯಲ್ಲಿ ಇದ್ದೆವು ಎಂದು ನುಡಿದಿರುತ್ತಾರೆ.

ನನ್ನ ಅಕ್ಕ ಪಾಲಾಕ್ಷಮ್ಮ ನನ್ನ ಮತ್ತು ಇತರರ ವಿರುದ್ಧ ಪಾಲುವಿಭಾಗ ಅಸಲು ದಾವೆ 42/2007 ರಂತೆ ದಾಖಲಿಸಿದ್ದು, ಅದು 1 ನೇ ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಲಯ ದಾವಣಗೆರೆಯಲ್ಲಿ ವಿಚಾರಣೆ ಆಗಿರುತ್ತದೆ ಎಂದರೆ ಸರಿ. ನಂತರ ಸದರಿ ನ್ಯಾಯಾಲಯದ ತೀರ್ಪಿನ ವಿರುದ್ಧ ನಾವು ಅಪೀಲನ್ನು ಇದೇ ನ್ಯಾಯಾಲಯದಲ್ಲಿ ದಾಖಲಿಸಿದ್ದು ಅದು ಆರ್ ಎ ನಂ.28/2022 ಎಂದು ದಾಖಲಾಗಿದ್ದು, ಅದು ಈಗ ಇತ್ಯರ್ಥವಾಗಿದೆ ಎಂದರೆ ಸರಿ. ಸದರಿ ದಾವೆಗಳನ್ನು ದಾಖಲಿಸಿದ ಬಳಿಕ ಮೃತ ಕುಸುಮಾಳಿಗೆ ಹೆಣ್ಣು ಮಕ್ಕಳಿಗೂ ಕೂಡ ತನ್ನ ತವರು ಮನೆಯ ಆಸ್ತಿಯಲ್ಲಿ ಸಮಪಾಲು ಬರುತ್ತದೆ ಎಂದು ತಿಳಿದುಬಂದ ಕಾರಣ ಆಕೆ ಪ್ರಾ.ಸಾ.3 ರವರ ಬಳಿ ತನ್ನ ಪಾಲನ್ನು ಕೇಳಲು ಆರಂಭಿಸಿದ್ದಳು ಎಂದರೆ ಸರಿಯಲ್ಲ. ಅದಕ್ಕೆ ಪ್ರಾ.ಸಾ.3 ರವರು ಸ್ಪಂದಿಸದೇ ಇರುವ ಕಾರಣ ಅವರಿಬ್ಬರ ನಡುವೆ ದ್ವೇಷ ಉಂಟಾಗಿರುತ್ತದೆ ಎಂದರೆ ಸರಿಯಲ್ಲ. ನನ್ನ ಇನ್ನೋರ್ವ ಮಗನ ಹೆಸರು ರುದ್ರೇಶ ಎಂದರೆ ಸರಿ.

ನನ್ನ ಮಗ ರುದ್ರೇಶ ಹಾಗೂ ಪ್ರಾ.ಸಾ.3 ರವರು ಸೇರಿಕೊಂಡು ಕುಸುಮಾಳ ಮನೆಗೆ ಹೋಗಿ ಆಕೆ ಪಾಲು ಕೇಳುತ್ತಿದ್ದ ವಿಚಾರಕ್ಕೆ ಸಂಬಂಧಿಸಿ ಜಗಳವಾಡಿರುತ್ತಾರೆ ಎಂದರೆ ಸರಿಯಲ್ಲ. ಆ ರೀತಿಯಾಗಿ ಅವರಿಬ್ಬರು ಹೋಗಿ ಜಗಳವಾಡಿದ್ದು, ಕುಸುಮಾ ತೀರಿಕೊಂಡ ದಿನದ ಬೆಳಗಿನ ಅವಧಿಯಲ್ಲಿ ಎಂದರೆ ಸುಳ್ಳು.

ಪ್ರಾ.ಸಾ.3 ಮತ್ತು ಅವರ ಕುಟುಂಬ ವಾಸವಾಗಿರುವ ಮೆಳ್ಳಿಕಟ್ಟೆ ಗ್ರಾಮದ ಮನೆಯು ಕರಿ ಹಂಚಿನ ಮೇಲ್ಚಾವಣಿ ಇರುವ ಮನೆಯಾಗಿದ್ದು, ಅದು 14 ಅಡಿ ಅಗಲ ಹಾಗೂ 50 ಅಡಿ ಉದ್ದದ ಮನೆಯಾಗಿರುತ್ತದೆ ಎಂದರೆ ಸಾಕ್ಷಿಯು 18 ಅಡಿ ಅಗಲದ ಮನೆಯೆಂದು ನುಡಿದಿರುತ್ತಾರೆ. ಸದರಿ ಮನೆಯಲ್ಲಿಯೇ ಪ್ರಾ.ಸಾ.3 ಹಾಗೂ ಮೃತ ಕುಸುಮಾ ಹುಟ್ಟಿ ಬೆಳೆದಿದ್ದು ಎಂದರೆ ಸಾಕ್ಷಿಯು ಅವರಿಬ್ಬರಲ್ಲದೇ ನಾವು ಸಹೋದರರು ಕೂಡ ಅದೇ ಮನೆಯಲ್ಲಿ ಹುಟ್ಟಿ ಬೆಳೆದಿರುತ್ತೇವೆ ಎಂದು ನುಡಿದಿರುತ್ತಾರೆ.

2 ನೇ ಆರೋಪಿಯ ಇನ್ನೋರ್ವ ಮಗ ರುದ್ರೇಶ ಎನ್ನುವವರು ಬಿಇ, ಎಂಎಸ್ ಮುಗಿಸಿಕೊಂಡು ಅಮೇರಿಕಾದಲ್ಲಿ ಪೋರ್ಡ ಕಂಪನಿಯಲ್ಲಿ ಕೆಲಸ ಮಾಡಿಕೊಂಡು ಅಲ್ಲಿಯೇ ವಾಸವಾಗಿರುತ್ತಾನೆ ಎಂದರೆ ಸಾಕ್ಷಿಯು ತನಗೆ ಆ ವಿಚಾರ 2 ನೇ ಆರೋಪಿ ಹೇಳಿದ್ದ ಎಂದು ನುಡಿದಿರುತ್ತಾರೆ. ಸದರಿ ಪಿ ರುದ್ರೇಶನಿಗೆ ತಿಂಗಳಿಗೆ 11 ಸಾವಿರ ಡಾಲರ್ ಸಂಬಳ ಇರುತ್ತದೆ ಎಂದರೆ ನನಗೆ ತಿಳಿದಿರುವುದಿಲ್ಲ. ಸದರಿ 2 ನೇ ಆರೋಪಿತರ ಕುಟುಂಬಕ್ಕೆ ಸಾಕಷ್ಟು ನೀರಾವರಿ ಜಮೀನು ಮತ್ತು ಗದ್ದೆಯಿದ್ದು, ಅಲ್ಲಿ ಅಡಿಕೆ ತೋಟ ಕೂಡ ಹೊಂದಿರುತ್ತಾರೆ ಎಂದರೆ ಸರಿ. ಸಾಕ್ಷಿಯು ಮುಂದುವೆದು ಅಡಿಕೆ ತೋಟ ಇರುವುದು ತಿಳಿದಿದೆ, ಆದರೆ ಗದ್ದೆ ಇರುವುದು ನನಗೆ ತಿಳಿದಿಲ್ಲ ಎಂದು ನುಡಿದಿರುತ್ತಾರೆ.

ನಾನು ಈ ದಿನ ಗುರುತಿಸಿದ ಬಂಗಾರದ ವಸ್ತುಗಳನ್ನು ಕುಸುಮಾಳ ಮದುವೆಯ ಮೂರು ವರ್ಷಗಳ ಮೊದಲು ಮಾಡಿಸಲಾಗಿತ್ತು. ನಾನು ಈ ದಿನ ಗುರುತಿಸಿದ ಬಂಗಾರದ ವಸ್ತುಗಳ ಕುರಿತು ಯಾವ ಯಾವ ಬಿಲ್ಲುಗಳು ಯಾವ ಯಾವ ಆಭರಣಕ್ಕೆ ಸಂಬಂಧಿಸಿದ ಬಿಲ್ಲುಗಳು ಎಂದು ನನಗೆ ಗುರುತಿಸಲು ಸಾಧ್ಯವಿಲ್ಲ ಎಂದರೆ ಸರಿ., ಸಾಕ್ಷಿಯು ಮುಂದುವರೆದು ಆಭರಣಗಳನ್ನು ಹಾಕಿಕೊಟ್ಟ ಬಳಿಕ ಅವುಗಳನ್ನು ಮುರಿದು ಬದಲಾವಣೆ ಮಾಡಿದ್ದಾರೆ ಎಂದು ನುಡಿದಿರುತ್ತಾರೆ. ನಾನು ಈ ದಿನ ಗುರುತಿಸಿದ ಬಂಗಾರದ ಆಭರಣಗಳ ಪೈಕಿ ಎರಡು ಮುಡಿ ಸರ ಎಂದರೆ ಯಾವುದು ಎಂದು ಗುರುತಿಸಲು ಸಾಧ್ಯವಿಲ್ಲ ಎಂದರೆ ಸಾಕ್ಷಿಯು ಆಭರಣಗಳನ್ನು ನೋಡಿ ಮು.ಮಾ.98 ಎಂದು ಗುರುತಿಸಿರುತ್ತಾರೆ. ಮು.ಮಾ.98 ಎರಡು ಮುಡಿಯ ಸರ ಅಲ್ಲ ಎಂದರೆ ಸಾಕ್ಷಿಯು ಅದನ್ನು ನಾವು ನೀಡಿದ ಬಳಿಕ ಆರೋಪಿತರು ಸ್ವಲ್ಪ ಬದಲಾವಣೆ ಮಾಡಿಸಿಕೊಂಡಿದ್ದಾರೆ ಎಂದು ನುಡಿದಿರುತ್ತಾರೆ. ನಾವು ನೀಡಿದ ಬಂಗಾರದ ವಸ್ತುಗಳು ಯಾವುದು ಹಾಗೂ ಅವುಗಳನ್ನು ಬದಲಾಯಿಸಿದ ಬಂಗಾರದ ವಸ್ತುಗಳು ಯಾವುದು ಎಂದು ನನಗೆ ಈಗ ಗುರುತಿಸಿ ಹೇಳಲು ಸಾಧ್ಯವಿಲ್ಲ ಎಂದರೆ ಸರಿ.

ಮು.ಮಾ.1 ಬೈಕನ್ನು 2 ನೇ ಆರೋಪಿಯ ಮಗ ರುದ್ರೇಶ ಅಮೇರಿಕಾದಿಂದ ಕಳುಹಿಸಿದ 49 ಸಾವಿರ ಹಣದಿಂದ ಖರೀದಿ ಮಾಡಲಾದ ಬೈಕ್ ಎಂದರೆ ಸರಿಯಲ್ಲ. ಪ್ರಾ.ಸಾ.3 ರವರು ಹಾಜರುಪಡಿಸಿದ ರಿಪೇರಿ ಕೊಟೇಶನ್ ಗಳು ಬಿಲ್ಲುಗಳಲ್ಲ ಎಂದರೆ ಸಾಕ್ಷಿಯು ತನಗೆ ಬಂಗಾರದ ವ್ಯಾಪಾರ ಮಾಡಿ ತಿಳಿದಿಲ್ಲ ಎಂದು ನುಡಿದಿರುತ್ತಾರೆ.

ಆರೋಪಿತರು 30 ತೊಲ ಬಂಗಾರ, ಮೂರು ಲಕ್ಷ ಹಣ ಹಾಗೂ ಒಂದು ಬೈಕಿನ ಕುರಿತು 60 ಸಾವಿರ ಹಣ ಹಾಗೂ ಖರ್ಚನ್ನು ಹಾಕಿ ಮದುವೆ ಮಾಡಿಕೊಡಬೇಕು ಎಂದು ಕೇಳಿರುತ್ತಾರೆ ಎಂದು, ಆಗ ನಾವು 25 ತೊಲ ಬಂಗಾರ, ಎರಡೂವರೆ ಲಕ್ಷ ಹಣ ಹಾಗೂ ಬೈಕು ಖರೀದಿಸಲು ಹಣ ಮತ್ತು ಮದುವೆ ಖರ್ಚನ್ನು ಹಾಕಿಕೊಂಡು ಮದುವೆ ಮಾಡಿ ನೀಡಿರುತ್ತೇವೆ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿತರು ಆ ರೀತಿಯಾದ ಯಾವುದೇ ವರದಕ್ಷಿಣೆ ಬೇಡಿಕೆಯನ್ನು ಇಟ್ಟಿದ್ದು ಇರುವುದಿಲ್ಲ ಹಾಗೂ ಪಡೆದುಕೊಂಡಿದ್ದು ಇರುವುದಿಲ್ಲ ಎಂದರೆ ಸರಿಯಲ್ಲ.

ನಾನು ಪೋಲೀಸರ ಸಮಕ್ಷಮ ಹೇಳಿಕೆ ನೀಡುವಾಗ "ತಹಶೀಲ್ದಾರ್ ಅವರ ಮುಂದೆಯು ಸಹ ಅಜ್ಜಿಯು ತೊಂದರೆ ಕೊಟ್ಟಿರುತ್ತಾರೆ ಅಂತ ಹೇಳಿದ್ದೆನು, ಆದರೆ ನಂತರ ವಿಚಾರ ಮಾಡಿದಾಗ ಇವರೆಲ್ಲರೂ ಜಗಳ ಮಾಡುವಾಗ ಅಜ್ಜಿ ಬುದ್ದಿ ಹೇಳಿ ಜಗಳ ಬಿಡಿಸುತ್ತಿದ್ದ ವಿಚಾರ ತಿಳಿಯಿತು. ” ಎಂದು ನಾನು ಹೇಳಿಕೆ ನೀಡಿದ್ದು ಇರುವುದಿಲ್ಲ. ಸದರಿ ಹೇಳಿಕೆಯ ಭಾಗವನ್ನು ನಿ.ಡಿ.14 ಎಂದು ಗುರುತಿಸಲಾಯಿತು.

ನಾನು ಮುಖ್ಯ ವಿಚಾರಣೆಯಲ್ಲಿ " ನಂತರ ಸಾಯುವ ಒಂದು ದಿನದ ಮೊದಲು ಕುಸುಮಾಳು ರಾತ್ರಿ ಫ್ರಾ.ಸಾ.3 ರವರಿಗೆ ದೂರವಾಣಿ ಮಾಡಿ ತನಗೆ ತುಂಬಾ ತೊಂದರೆ ನೀಡುತ್ತಿದ್ದಾರೆ ಬಂದು ಕರೆದುಕೊಂಡು ಹೋಗಿ ಎಂದು ತಿಳಿಸಿರುತ್ತಾಳೆ. ಈ ವಿಷಯವನ್ನು ನನಗೆ ಫ್ರಾ.ಸಾ.3 ರವರು ದೂರವಾಣಿ ಮಾಡಿ ತಿಳಿಸಿರುತ್ತಾರೆ. ಆಗ ನಾನು ಆತನಲ್ಲಿ ಮರುದಿನ ಸಾಯಂಕಾಲ ಹೋಗಿ ಮಾತನಾಡೋಣ ಎಂದು ಹೇಳಿರುತ್ತೇನೆ.” ಎಂದು ನುಡಿದಿದ್ದು, ಪೋಲೀಸರಿಗೆ ನೀಡಿದ ಹೇಳಿಕೆಯಲ್ಲಿ "ದಿಃ 18-09-2017 ರಂದು ರಾತ್ರಿ 10-00 ಗಂಟೆ ಸಮಯದಲ್ಲಿ ಕುಸುಮಾ ನನ್ನ ತಮ್ಮನ ಮಗನಾದ ಹನುಮಂತನಿಗೆ ಪೋನ್ ಮಾಡಿ, ನನ್ನ ಗಂಡ ನನಗೆ ಬಹಳ ಹೊಡೆದಿದ್ದಾನೆ, ಅತ್ತೆ ಮನೆಯಲ್ಲಿ ಇಲ್ಲ, ರೂಮ್ ನಲ್ಲಿ ನನ್ನ ಒಬ್ಬಳನ್ನೇ ಕೂಡಿ ಹಾಕಿಕೊಂಡು ನಿನ್ನನ್ನು ಸಾಯಿಸಿಬಿಡುತ್ತೇನೆ ಅಂತಾ ಹೇಳಿ ಹೊಡೆದಿದ್ದಾನೆ, ನಾನು ಇಲ್ಲೆ ಇದ್ದರೆ, ನನ್ನನ್ನು ಸಾಯಿಸಿಬಿಡುತ್ತಾನೆ, ಬಂದು ಕರೆದುಕೊಂಡು ಹೋಗು ಅಂತಾ ಹೇಳಿ ಅಳುತ್ತಿದ್ದ ವಿಚಾರವನ್ನು ದಿಃ 19-08-2017 ರಂದು ಬೆಳಿಗ್ಗೆ ಹನುಮಂತ ನನಗೆ ಪೋನ್ ಮಾಡಿ ಹೇಳಿ ಕರೆದುಕೊಂಡು ಬರಲು ಹೋಗಲು ಹೇಳಿದ್ದನು. ನಾನು, ಎಲ್ಲರೂ ಸಾಯಂಕಾಲ ಹೋಗಿ ಕರೆದುಕೊಂಡು ಬರೋಣ ಅಂತಾ ಹೇಳಿದ್ದೆನು. ” ಎಂದು ಬರೆಯಲಾಗಿದ್ದು, ಆ ರೀತಿಯಾಗಿ ನಾನು ಪೋಲೀಸರಿಗೆ ಹೇಳಿರುವುದಿಲ್ಲ. ಸದರಿ ಹೇಳಿಕೆಯ ಭಾಗವನ್ನು ನಿ.ಡಿ.15 ಎಂದು ಗುರುತಿಸಲಾಯಿತು.

ನಾನು ಮುಖ್ಯ ವಿಚಾರಣೆಯಲ್ಲಿ " ನಂತರ ಮರುದಿನ ಬೆಳಿಗ್ಗೆ 11-30 ಯಿಂದ 12-00 ಗಂಟೆ ಸಮಯದಲ್ಲಿ ಫ್ರಾ.ಸಾ.3 ರವರು ನನಗೆ ಪುನಃ ದೂರವಾಣಿ ಮಾಡಿ ಕುಸುಮಾ ತೀರಿಕೊಂಡಿದ್ದಾಳೆ, ಏನೋ ಮಾಡಿಕೊಂಡಿದ್ದಾಳೆ ಎಂದು 1 ನೇ ಆರೋಪಿ ತಿಳಿಸಿದ್ದಾನೆ ಎಂದು ನನಗೆ ತಿಳಿಸಿರುತ್ತಾನೆ.” ಎಂದು ನುಡಿದಿದ್ದು, ಪೋಲೀಸರಿಗೆ ನೀಡಿದ ಹೇಳಿಕೆಯಲ್ಲಿ " ಅಷ್ಟರಲ್ಲಿ ಮದ್ಯಾಹ್ನ 1-00 ಗಂಟೆ ಸುಮಾರಿಗೆ ಹನುಮಂತ ಪೋನ್ ಮಾಡಿ ತಿಳಿಸಿದ್ದೇನೆಂದರೆ. ” ಎಂದು ಬರೆಯಲಾಗಿದ್ದು, ಆ ರೀತಿಯಾಗಿ ನಾನು ಪೋಲೀಸರಿಗೆ ಹೇಳಿರುವುದಿಲ್ಲ. ಸದರಿ ಹೇಳಿಕೆಯ ಭಾಗವನ್ನು ನಿ.ಡಿ.16 ಎಂದು ಗುರುತಿಸಲಾಯಿತು.

ನಾನು ಮುಖ್ಯ ವಿಚಾರಣೆಯಲ್ಲಿ " ನಾವು ಅಲ್ಲಿ ಹೋಗಿ ನೋಡಿದಾಗ ಸದರಿ ಮನೆಯ 1 ನೇ ಮಹಡಿಯಲ್ಲಿ ಮೃತ ಕುಸುಮಾಳ ಶವವು ನೆಲದ ಮೇಲೆ ಬಿದ್ದಿದ್ದು, ಕುತ್ತಿಗೆಗೆ ಸೀರೆ ಸುತ್ತಿಕೊಂಡಿದ್ದು, " ಎಂದು ನುಡಿದಿದ್ದು, ಪೋಲೀಸರಿಗೆ ನೀಡಿದ ಹೇಳಿಕೆಯಲ್ಲಿ ಆ ವಿಷಯವನ್ನು ಹೇಳಿದ್ದೀರಾ ಎಂಬ ಪ್ರಶ್ನೆಗೆ ಸಾಕ್ಷಿಯು ಹೇಳಿದ್ದೇನೆಯೋ ಇಲ್ಲವೋ ನೆನಪಿಲ್ಲ ಎಂದು ನುಡಿದಿರುತ್ತಾರೆ.

ನಾನು ಪೋಲೀಸರಿಗೆ ನೀಡಿದ ಹೇಳಿಕೆಯಲ್ಲಿ " ಆದರೆ ಪ್ರಕಾಶ ಕೊಲೆ ಮಾಡಿದ ದಿನ ನಾಗರತ್ನಮ್ಮ ಊರಿನಲ್ಲಿ ಇಲ್ಲದೇ ಇರುವಾಗ, ಏಕಾಂತಪ್ಪ ಜಮೀನಿಗೆ ಹೋಗಿದ್ದಾಗ, ಪ್ರಕಾಶ ಒಬ್ಬನೇ ಸೇರಿ ಕುಸುಮಾಳ ಕೊಲೆ ಮಾಡಿರುತ್ತಾನೆ. " ಎಂದು ಬರೆಯಲಾಗಿದ್ದು, ಆ ರೀತಿಯಾಗಿ ನಾನು ಪೋಲೀಸರಿಗೆ ಹೇಳಿಕೆ ನೀಡಿದ್ದು ಇರುವುದಿಲ್ಲ. ಸದರಿ ಹೇಳಿಕೆಯ ಭಾಗವನ್ನು ನಿ.ಡಿ.17 ಎಂದು ಗುರುತಿಸಲಾಯಿತು.

ನಾನು ಪೋಲೀಸರಿಗೆ ನೀಡಿದ ಮರು ಹೇಳಿಕೆಯಲ್ಲಿ " ಕುಸುಮಾಳಿಗೆ ಏಕಾಂತಪ್ಪ ಮತ್ತು ರತ್ನಮ್ಮ ಇವರುಗಳು ಹೆಚ್ಚಿನ ವರದಕ್ಷಿಣೆಯನ್ನು ತರುವಂತೆ ಒತ್ತಾಯ ಮಾಡಿರುತ್ತಾರೆ ಅಂತಾ ಹೇಳಿಕೆಯನ್ನು ನೀಡಿದ್ದೆನು, ಆದರೆ ಅವರಿಬ್ಬರು ವರದಕ್ಷಿಣೆ ಕಿರುಕುಳ ನೀಡಿರುವುದಿಲ್ಲ. " ಎಂದು ಬರೆಯಲಾಗಿದ್ದು, ಆ ರೀತಿಯಾಗಿ ನಾನು ಹೇಳಿಕೆಯನ್ನು ನೀಡಿದ್ದು ಇರುವುದಿಲ್ಲ. ಸದರಿ ಹೇಳಿಕೆಯ ಭಾಗವನ್ನು ನಿ.ಡಿ.18 ಎಂದು ಗುರುತಿಸಲಾಯಿತು.

ನಾನು ಮೃತಳ ಶವ ಪಂಚನಾಮೆಯನ್ನು ಬರೆಯುವಾಗ ಇದ್ದೆ. ಸದರಿ ಶವ ಪಂಚನಾಮೆ ಬರೆಯುವಾಗ ಮೃತಳ ಕುತ್ತಿಗೆಗೆ ಸೀರೆ ಸುತ್ತಿತ್ತು ಎಂದು ಬರೆಯಲಾಗಿದೆಯೇ ಎಂಬ ಪ್ರಶ್ನೆಗೆ ಸಾಕ್ಷಿಯು ನಾನು ಪಂಚನಾಮೆಯಲ್ಲಿ ಬರೆದಿರುವ ಸಂಗತಿ ನೋಡಿರುವುದಿಲ್ಲ ಎಂದು ನುಡಿದಿರುತ್ತಾರೆ. ಸದರಿ ಶವ ಪಂಚನಾಮೆಯಲ್ಲಿ ಕಾಲಂ ನಂ.7 ರಲ್ಲಿ ಮೂರನೇ ಲೈನಿನಲ್ಲಿ ಕೆಂಪು ಹಳದಿ ಬಣ್ಣದ ವೇಲು ಇರುವ ಕುರಿತು ಬರೆಯಲಾಗಿದ್ದು, ಆ ಕುರಿತು ನಿಮಗೆ ವಿಷಯ ತಿಳಿದಿದೆಯೇ ಎಂಬ ಪ್ರಶ್ನೆಗೆ ಸಾಕ್ಷಿಯು ಸದರಿ ಶವ ಪಂಚನಾಮೆಯಲ್ಲಿ ಏನು ಬರೆದಿದ್ದಾರೆ ಎಂದು ತನಗೆ ತಿಳಿದಿಲ್ಲ ಎಂದು ನುಡಿದಿರುತ್ತಾರೆ.

ನಾನು ಮುಖ್ಯ ವಿಚಾರಣೆಯಲ್ಲಿ ನಾವು ಆರೋಪಿತರ ಮನೆಗೆ ಹೋದ ಬಳಿಕ ಅಲ್ಲಿಗೆ ಪೋಲೀಸರು ಬಂದು ನೋಡಿರುತ್ತಾರೆ ಎಂದು ಹೇಳಿದ್ದು, ಸದರಿ ಪೋಲೀಸರು ಎಷ್ಟು ಗಂಟೆಗೆ ಬಂದಿರುತ್ತಾರೆ ಎಂಬ ಪ್ರಶ್ನೆಗೆ ಸಾಕ್ಷಿಯು ನಾವು ಹೋದಾಗ ಮದ್ಯಾಹ್ನ 1-00 ಗಂಟೆಯಾಗಿದ್ದು, ಅವರು ತದನಂತರ 10 ನಿಮಿಷದಲ್ಲಿ ಬಂದಿರುತ್ತಾರೆ ಎಂದು ನುಡಿದಿರುತ್ತಾರೆ. ಆ ಸಮಯದಲ್ಲಿ ಬಂದ ಪೋಲೀಸರು ನನ್ನನ್ನು ವಿಚಾರಿಸಿದ ಕುರಿತು ನನಗೆ ಈಗ ಜ್ಞಾಪಕ ಇರುವುದಿಲ್ಲ. ಆ ಸಮಯದಲ್ಲಿ ಬಂದ ಪೋಲೀಸರು ಇನ್ ಸ್ಪೆಕ್ಟರ್ ಹಾಗೂ ಪೋಲೀಸರು ಆಗಿರುತ್ತಾರೆ. ಅಲ್ಲದೇ ಆ ಸಮಯದಲ್ಲಿ ಫ್ರಾ.ಸಾ.3 ರವರು ಪೋಲೀಸರಿಗೆ ದೂರನ್ನು ಕೂಡ ಸಲ್ಲಿಸಿರುತ್ತಾರೆ ಎಂದು ನಾನು ಮುಖ್ಯ ವಿಚಾರಣೆಯಲ್ಲಿ ನುಡಿದಿದ್ದು, ಸದರಿ ದೂರನ್ನು ಫ್ರಾ.ಸಾ.3 ರವರು ಲಿಖಿತವಾಗಿ ನೀಡಿರುತ್ತಾರೆ. ಆ ಸಮಯದಲ್ಲಿ ಬಂದಂತಹ ಪೋಲೀಸರು ಸ್ಥಳದ ಹಾಗೂ ಶವದ ಪೋಟೋಗಳನ್ನು ತೆಗೆದಿರುತ್ತಾರೆ. ಆ ಸಮಯದಲ್ಲಿ ಬಂದ ಪೋಲೀಸರು ಸ್ಥಳದ ಪಂಚನಾಮೆಯನ್ನು ಬರೆದಿದ್ದು ಇರುವುದಿಲ್ಲ. ಸದರಿ ಸ್ಥಳದಿಂದ ಶವವನ್ನು ದಾವಣಗೆರೆಯ ಬಾಪೂಜಿ ಆಸ್ಪತ್ರೆಗೆ ತೆಗೆದುಕೊಂಡು ಬಂದಿರುತ್ತಾರೆ ಎಂದು ನಾನು ಮುಖ್ಯ ವಿಚಾರಣೆಯಲ್ಲಿ ನುಡಿದಿದ್ದು, ಸದರಿ ಶವವನ್ನು ಪೋಲೀಸರು ಅಲ್ಲಿಂದ ತಂದಿರುತ್ತಾರೆ.

1 ಮತ್ತು 2 ನೇ ಆರೋಪಿತರು ಹೊಲಕ್ಕೆ ಹೋದ ಸಂದರ್ಭದಲ್ಲಿ, 3 ನೇ ಆರೋಪಿತಳು ತನ್ನ ಮಗಳ ಹೆರಿಗೆಗಾಗಿ ಬೆಂಗಳೂರಿಗೆ ಹೋದ ಸಮಯದಲ್ಲಿ, ಮನೆಯಲ್ಲಿ ಅಜ್ಜಿ ಮಾತ್ರ ಇದ್ದಾಗ ಪ್ರಾ.ಸಾ.3 ಹಾಗೂ ನನ್ನ ಮಗ ರುದ್ರೇಶ ಸೇರಿಕೊಂಡು ಮೋಟಾರ್ ಸೈಕಲ್ ನಲ್ಲಿ ಅಲ್ಲಿಗೆ ಹೋಗಿ ಮೃತ ಕುಸುಮಾಳನ್ನು ಕೊಲೆ ಮಾಡಿದ್ದಾರೆ ಎಂದರೆ ಸರಿಯಲ್ಲ. ಸದರಿ ಶವ ಇದ್ದ 1 ನೇ ಮಹಡಿಯ ಕೋಣೆಗೆ ಹೋಗಲು ಸದರಿ ಮನೆಯ ಒಳಗಿನಿಂದಲೂ ಹಾಗೂ ಹೊರಗಡೆಯಿಂದಲೂ ಮೆಟ್ಟಿಲುಗಳು ಇವೆ ಎಂದರೆ ಸಾಕ್ಷಿಯು ಒಳಗಿನಿಂದ ಮಾತ್ರ ಇದೆ, ಹೊರಗಿನಿಂದ ಇರುವುದು ತನಗೆ ತಿಳಿದಿಲ್ಲ ಎಂದು ನುಡಿದಿರುತ್ತಾರೆ. ಸದರಿ 2 ನೇ ಆರೋಪಿತನ ತಾಯಿಗೆ ಮೊಣಕಾಲು ನೋವು ಇದ್ದು, ಕಣ್ಣುಗಳು ವಯಸ್ಸಿನಿಂದಾಗಿ ಮಂಜಾಗಿದ್ದು, ಕಿವಿ ಕೂಡ ಕೇಳುತ್ತಿರಲಿಲ್ಲ ಎಂದರೆ ಸರಿಯಲ್ಲ. ನನ್ನ ಮಗ ರುದ್ರೇಶ ಹಾಗೂ ಪ್ರಾ.ಸಾ.3 ರವರು ಎಸಗಿರುವ ದುಷ್ಕೃತ್ಯವನ್ನು ಮರೆಮಾಚಲು ಹಾಗೂ ಆರೋಪಿತರ ಮೇಲೆ ಇರುವ ಸೇಡಿನಿಂದ ಪ್ರಾ.ಸಾ.3 ರವರ ಮೂಲಕ ಸುಳ್ಳು ದೂರನ್ನು ನೀಡಿ ಈಗ ಸುಳ್ಳು ಸಾಕ್ಷಿಯನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಆರೋಪಿತರು ಹೆಚ್ಚಿನ ವರದಕ್ಷಿಣೆಗಾಗಿ ಮೃತಳಿಗೆ ಕಿರುಕುಳ ನೀಡುತ್ತಿದ್ದರು ಎಂದು ಈ ಪ್ರಕರಣಕ್ಕಾಗಿ ಸೃಷ್ಟಿಸಿ ಹೇಳುತ್ತಿದ್ದೇವೆ ಎಂದರೆ ಸರಿಯಲ್ಲ. ಮೃತಳು ತೀರಿಕೊಳ್ಳುವ ಹಿಂದಿನ ದಿನ ರಾತ್ರಿ ಪ್ರಾ.ಸಾ.3 ರವರಿಗೆ ದೂರವಾಣಿ ಮಾಡಿದ್ದಳು, ನಂತರ ಪ್ರಾ.ಸಾ.3 ನನಗೆ ದೂರವಾಣಿ ಮಾಡಿ ವಿಷಯ ತಿಳಿಸಿರುತ್ತಾನೆ ಎಂದು ಈ ಪ್ರಕರಣಕ್ಕಾಗಿ ಸೃಷ್ಟಿಸಲಾಗಿದೆ ಎಂದರೆ ಸರಿಯಲ್ಲ. ನಾನು ಮತ್ತು ಇತರರು ಮೃತಳ ಮನೆಗೆ ಹೋಗಿದ್ದು, ಅಲ್ಲಿ ನೋಡಿದಾಗ ಮೃತಳ ಕುತ್ತಿಗೆಗೆ ಸೀರೆ ಸುತ್ತಿಕೊಂಡಿತ್ತು ಎಂದು ಈ ಪ್ರಕರಣಕ್ಕಾಗಿ ಸೃಷ್ಟಿಸಲಾಗಿದೆ ಎಂದರೆ ಸರಿಯಲ್ಲ. ಮೃತಳ ಸಾವಿಗೂ ಈ ಪ್ರಕರಣಕ್ಕೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ.

ಮರುವಿಚಾರಣೆಃ- ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ . ಹೇ. ಕೇ. ಸರಿಯಾಗಿದೆ.

PRAVEEN KUMAR RAGHAV NAIK

Digitally signed by PRAVEEN KUMAR RAGHAV NAIK
Date: 2026.01.08 14:34:56 +0530

2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ದಾವಣಗೆರೆ.